**ದಿನಾಂಕಃ 05.08.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ:- ಶ್ರೀ. ಹೆಚ್ ಎನ್ ಡಿ ವಕೀಲರಿಂದ ಅರ್ಜಿದಾರರ ಪರ**

ನಾನು ನನ್ನ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ ಹಾಗೂ ಪ್ರಮಾಣ ಪತ್ರದಲ್ಲಿರುವ ಎಲ್ಲಾ ವಿಚಾರಗಳನ್ನು ನಾನು ನನ್ನ ವಕೀಲರಿಗೆ ತಿಳಿಸಿ ನನ್ನ ವಕೀಲರ ಮುಖಾಂತರ ಬರೆಸಿರುತ್ತೇನೆ ಹಾಗೂ ನನ್ನ ಸಹಿಯನ್ನು ಪ್ರಮಾಣ ಪತ್ರಕ್ಕೆ ಹಾಕಿರುತ್ತೇನೆ.

**ಪಾಟೀ ಸವಾಲು ಶ್ರೀ ಆರ್ ಹೆಚ್ ವಕೀಲರಿಂದ 2 ನೇ ಎದುರುದಾರರ ಪರಃ**

ಮೃತ ತಿಮ್ಮಪ್ಪ, ನಾನು, ರಾಜು ಹಾಗೂ ಡ್ರೈವರ್ ಆ ದಿನ ಚಿತ್ರದುರ್ಗಕ್ಕೆ ಬುಲೆರೋ ವಾಹನದಲ್ಲಿ ಹೋಗಿರುತ್ತೇವೆ. 6 ರಿಂದ 7 ಕುರಿಗಳನ್ನು ಆ ದಿನ ಖರೀದಿಸಿರುತ್ತೇವೆ. ಸದಿರಿ ಕುರಿಗಳನ್ನು ಬುಲೆರೋ ವಾಹನದಲ್ಲಿ ಹಾಕಿಕೊಂಡು ಬಂದಿರುತ್ತೇವೆ. ಇದರಿಂದ ಗಾಡಿಗೆ ಲೋಡ ಜಾಸ್ತಿ ಆಗಿತ್ತು ಎಂದರೆ ಸರಿಯಲ್ಲ. ಡ್ರೈವಿಂಗನ್ನು ಯರು ಮಾಡುತ್ತಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಅಪಘಾತ ಹೇಗಾಯಿತು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಬರುತ್ತಿದ್ದ ಗಾಡಿ ಅತೀ ವೇಗ ಇದ್ದುದ್ದರಿಂದ ಅಪಘಾತ ಆಗಿರುತ್ತದೆ. ನಾವು ಕುರಿಯನ್ನು ಜಾಸ್ತಿ ತುಂಬಿದ್ದರಿಂದ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 1 ನೇ ಎದುರುದಾರರ ಅತೀ ವೇಗ ಹಾಗೂ ಅಜಾಗರೂಕತೆಯಿಂದ ಅಪಘಾತ ಆಗಿರುತ್ತದೆ ಎಂದು ಉತ್ತರಿಸುತ್ತಾರೆ. ಸದರಿ ಅಪಘಾತದಿಂದ ನನಗೆ, ತಿಮ್ಮಪ್ಪನವರಿಗೆ ಪೆಟ್ಟಾಗಿರುತ್ತದೆ. ಡ್ರೈವರ್ ಗೆ ಹಾಗೂ ರಾಜು ಗೆ ಯಾವುದೇ ಪೆಟ್ಟು ಆಗಿರುವುದಿಲ್ಲ. ಮೃತ ತಿಮ್ಮಪ್ಪ ನನ್ನ ಸಂಬಂಧಿ ಎಂದರೆ ಸರಿ. ಪೊಲೀಸರಿಗೆ ನಾನು ಕುಂಸಿ ಠಾಣೆಯಲ್ಲಿ ಹೇಳಿಕೆ ನೀಡಿರುತ್ತೇನೆ. ಆ ದಿನ 1 ನೇ ಎದುರುದಾರರಿಗೆ ಡ್ರೈವಿಂಗ್ ಲೈಸನ್ಸ ಇತ್ತೊ ಇಲ್ಲವೋ ನಾನು ತಿಳಿದುಕೊಂಡಿರುವುದಿಲ್ಲ. 1 ನೇ ಅರ್ಜಿದಾರರು ತಿಮ್ಮಪ್ಪನವರ ಜಮೀನನ್ನು ಸಾಗುವಳಿ ಮಾಡಿಕೊಂಡು ಹೋಗುತ್ತಿದ್ದಾರೆ ಎಂದರೆ ಸರಿ. ಮೃತ ತಿಮ್ಮಪ್ಪನಿಗೆ ಅಪಘಾತದಲ್ಲಿ ಪೆಟ್ಟು ಬಿದ್ದ ಬಳಿಕ ಅಂಬುಲೆನ್ಸ ನಲ್ಲಿ ಕರೆದುಕೊಂಡು ಹೋಗಿರುತ್ತಾರೆ

ಅದಾದನಂತರ ಎನಾಯಿತು ನನಗೆ ಗೊತ್ತಿರುವುದಿಲ್ಲ. ನಾನು ಮೆಗಾಂ ಆಸ್ಪತ್ರೆ ಹಾಗೂ ಸಾಗರದ ಭಗವತ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ.

ಮೃತ ತಿಮ್ಮಪ್ಪ ನನ್ನ ಸಂಬಂಧಿ ಆಗಿರುವುದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಅಪಘಾತದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)
ಓದಿ ಹೇಳಿ ಕೇಳಿ ಸರಿ ಇದೆ

1 ನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
Addl. MACT-10 ಸಾಗರ.